# TEACHERS' & ENGINEERS' DAY-2026







ಕೋಲಾರ ವಾಹಿನಿ KOLARA VAHINI Kannada Daily

## ಎಸ್.ಜೆ.ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಜಿನಿರಸ್ ದಿನ ಹಾಗೂ ಶಿಕ್ಷಕರ ದಿನಾಚರಣೆ-2026 ಕಾರ್ಯಕ್ರಮ

ಚಿಕ್ಕಬಳ್ಳಾಪುರ:- ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದ ಬಿ.ಜಿ.ಎಸ್ ಕಾನ್ಫರೆನ್ಸ್ ಹಾಲ್‌ನಲ್ಲಿ ?ಇಂಜಿನಿರ?ಸ್ ದಿನ ಹಾಗೂ ?ಶಿಕ್ಷಕರ ದಿನಾಚರಣೆ-2026? ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರು ಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿರವರ ದಿವ್ಯ ಆಶೀರ್ವಾದದೊಂದಿಗೆ ಹಾಗೂ ಪೂಜ್ಯ ಶ್ರೀ ಮಂಗಳನಾಥಸ್ವಾಮೀಜಿರವರ ಸಾನಿಧ್ಯದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಗಳಾಗಿ ಹಿರಿಯ ಶಿಕ್ಷಣ ತಜ್ಞರು, ಮಾರ್ಗದರ್ಶಕರು ಆದ ಡಾ॥ ಹೆಚ್. ಎನ್.ಶಿವಶಂಕರ್, ನಿವೃತ್ತ ಪ್ರಾಂಶುಪಾಲರು, ಯು.ವಿ.ಸಿ.ಇ, ಬೆಂಗಳೂರು, ಮಾಜಿ ನಿರ್ದೇಶಕರು, ಆರ್.ಎನ್.ಎಸ್.ಐ.ಟಿ ರವರು ಹಾಗೂ ಪ್ರಾಂಶುಪಾಲರಾದ ಡಾ॥ ಜಿ.ಟಿ ರಾಜು, ಮತ್ತು ಶ್ರೀ ರಂಗಸ್ವಾಮಿ ಜಿ.ಆರ್, ಆಡಳಿತಾಧಿಕಾರಿಗಳು, ಡಾ॥ ಮಂಜುನಾಥ್ ಕುಮಾರ್ ಬಿ.ಹೆಚ್, ಮುಖ್ಯಸ್ಥರು, ಗಣಕಯಂತ್ರ ವಿಭಾಗ, ಡೀನ್ ಅಕಾಡೆಮಿಕ್ಸ್, ವಿವಿಧ ವಿಭಾಗದ ಮುಖ್ಯಸ್ಥರು, ಬೋದಕ, ಬೋದಕೇತರ ಮತ್ತು ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಪ್ರಾಂಶುಪಾಲರಾದ ಡಾ॥ ಜಿ.ಟಿ ರಾಜು ರವರು ಗಣ್ಯರಿಗೆ ಸ್ವಾಗತಿಸಿ ಮಾತನಾಡಿ ಭಾರತ ರತ್ನ ಸರ್. ಎಂ.ವಿಶ್ವೇಶ್ವರಯ್ಯ ರವರ ಸಾಧನೆಗಳನ್ನು ಸ್ಮರಿಸಿ, ಇಂಜಿನಿರ?ಸ್ಗಳು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಗೌರವಿಸುವ ಅಮೂಲ್ಯವಾದ ದಿನ. ಯಾವುದೇ ಸಣ್ಣ ಕೆಲಸವೇ ಆಗಲಿ ಶ್ರದ್ದೆಯಿಂದ ಮಾಡಿದ್ದಲ್ಲಿ ಪರಿಪೂರ್ಣತೆಯನ್ನು ಕಾಣುತ್ತದೆ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರೊಂದಿಗೆ ಅವರ ವ್ಯಕ್ತಿತ್ವವನ್ನೂ ರೂಪಿಸುತ್ತಾರೆ. ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್ ರವರನ್ನು ನೆನೆಯುತ್ತಾ ಅವರ ಆದರ್ಶಗಳನ್ನು ಶಿಕ್ಷಕರಾದ ನಾವು ಬೆಳೆಸಿಕೊಳ್ಳಬೇಕು ಎಂದರು.

ಈ ಸಮಾರಂಭದಲ್ಲಿ ಡಾ॥ ಹೆಚ್. ಎನ್.ಶಿವಶಂಕರ್ ರವರು ಮಾತನಾಡಿ ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇದ್ದಲ್ಲಿ ಉತ್ತಮವಾಗಿ ಬೆಳೆಯಬೇಕೆಂಬ ನಿರೀಕ್ಷಿಸಬಹುದು. ಪ್ರಶ್ನೆಗಳನ್ನು ಕೇಳುವ ಮನೋಭಾವನೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಮೂಡಿಸಬೇಕು. ಕಲಿಕೆಯೇ ಮೆದುಳಿಗೆ ಟಾನಿಕ್, ಇಂಜಿನಿಯರ್ ಸಮಾಜದ ಸಮಸ್ಯೆಯನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದುವಂತಾಗಬೇಕು. ತಮ್ಮ ಶೈಕ್ಷಣಿಕ ಅನುಭವವನ್ನು ಶಿಕ್ಷಕರಲ್ಲಿ ಹಂಚಿಕೊಂಡರು. ಇವರು ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್ ರವರಿಂದಲೇ ಪಧವಿ ಪ್ರಮಾಣ ಪತ್ರವನ್ನು ಪಡೆದಿದ್ದು ಹೆಮ್ಮೆಯ



ಸಂಗತಿ ಎಂದರು.

ಭಾರತ ರತ್ನ ಸರ್. ಎಂ.ವಿಶ್ವೇಶ್ವರಯ್ಯ ರವರ ಸಾಧನೆಗಳನ್ನು ಸ್ಮರಿಸಿ, ಇಂಜಿನಿರ?ಸ್ಗಳು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಗೌರವಿಸುವ ಅಮೂಲ್ಯವಾದ ದಿನ. ಶಿಕ್ಷಣವೆಂದರೆ ವ್ಯಕ್ತಿತ್ವದ ಪರಿವರ್ತನೆ, ಸಮರ್ಥ ಜವಾಬ್ದಾರಿಯುತ ಸಮಾಜಮುಖಿ ಇಂಜಿನಿಯರ್‌ಗಳನ್ನು ರೂಪಿಸುವಲ್ಲಿ ಮುಖ್ಯ ಪಾತ್ರವಹಿಸುತ್ತದೆ ಎಂದರು.ಈ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಮಂಗಳನಾಥಸ್ವಾಮೀಜಿರವರು ತಮ್ಮ ಆಶೀರ್ವಚನದಲ್ಲಿ ಇಂದಿನ ತಲೆಮಾರಿಗೆ ಸೂಕ್ತವಾಗುವ ತಂತ್ರಜ್ಞಾನದ ಸದ್ಬಳಕೆ, ಹೊಸ ಚಿಗುರು ಹಳೆ ಬೇರಿದ್ದಲ್ಲಿ ಸೊಬಗು ಎಂಬಂತೆ ಜ್ಞಾನಾರ್ಜನೆ ಮಾಡಬೇಕು. ನಮ್ಮ ಎಸ್.ಜೆ.ಸಿ.ಐ.ಟಿ ಯಲ್ಲಿ ಪ್ರಾಂಶುಪಾಲರಾದ ಡಾ॥ ಜಿ.ಟಿ ರಾಜು ರವರ ಮಾರ್ಗದರ್ಶನ, ಉತ್ತಮ ನಾಯಕತ್ವ, ಪ್ರತಿಯೊಬ್ಬರು ಬೆಳೆಯಬೇಕು ಎಂಬ ಉತ್ತಮ ವ್ಯಕ್ತಿತ್ವ ನಮ್ಮೆಲ್ಲರಿಗೂ ಪ್ರೇರಣೆ ಎಂದು ಆಶೀರ್ವಚಿಸಿರು.

ಪ್ರಾಂಶುಪಾಲರಾದ ಡಾ॥ ಜಿ.ಟಿ ರಾಜು ರವರು ಗುರುವಿನ ಕರುಣೆಯಾಗಬೇಕಾದರೆ ಗರ್ವವ ಬಿಡಬೇಕು ಎಂಬ ಗೀತೆಯ ಮೂಲಕ ವೇದಿಕೆಗೆ ವಿಶೇಷ ಮೆರುಗನ್ನು ತಂದುಕೊಟ್ಟರು

ಈ ಕಾರ್ಯಕ್ರಮದಲ್ಲಿ ಕಾಲೇಜಿನ ನಿವೃತ್ತ, ಭೋದಕ ಮತ್ತು ಭೋದಕೇತರ ಸಿಬ್ಬಂದಿಯವರಿಗೆ ಸನ್ಮಾನಿಸಲಾಯಿತು. ಹಾಗೂ ವಿವಿಧ ವಿಭಾಗಗಳಲ್ಲಿ ಅತ್ಯತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕನ್ನಡಪ್ರಭ

# ಎಸ್‌ಜೆಸಿಐಟಿಯಲ್ಲಿ ಶಿಕ್ಷಕ, ಇಂಜನಿಯರ್ಸ್ ದಿನಾಚರಣೆ



ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿ.ಜಿ.ಎಸ್ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆದ ಇಂಜಿನಿಯರ್ಸ್ ಹಾಗೂ ಶಿಕ್ಷಕರ ದಿನಾಚರಣೆ-2025 ಕಾರ್ಯಕ್ರಮವನ್ನು ಡಾ.ಎಚ್.ಎನ್.ಶಿವಶಂಕರ್‌ಉದ್ಘಾಟಿಸಿದರು.

**ಚಿಕ್ಕಬಳ್ಳಾಪುರ:** ಶಿಕ್ಷಕರು ನಮ್ಮ ಜೀವನವನ್ನು ರೂಪಿಸುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಪೋಷಕರು ನಮಗೆ ಜೀವನವನ್ನು ನೀಡುತ್ತಾರೆ. ಆದರೆ ಶಿಕ್ಷಕರು ಜೀವನಕ್ಕೆ ಸರಿಯಾದ ಮಾರ್ಗವನ್ನು ತೋರುತ್ತಾರೆ. ಪುಸ್ತಕಗಳ ಜ್ಞಾನವನ್ನು ಮಾತ್ರವಲ್ಲದೆ ಉತ್ತಮ ಮೌಲ್ಯಗಳು, ಶಿಸ್ತು ಮತ್ತು ವ್ಯಕ್ತಿತ್ವವನ್ನು ಶಿಕ್ಷಕರು ಕಲಿಸುತ್ತಾರೆ ಎಂದು ಬೆಂಗಳೂರಿನ ಯು.ವಿ.ಸಿ.ಇ. ನಿವೃತ್ತ ಪ್ರಾಂಶುಪಾಲ, ಹಿರಿಯ ಶಿಕ್ಷಣ ತಜ್ಞ ಡಾ.ಎಚ್.ಎನ್.ಶಿವಶಂಕರ್ ತಿಳಿಸಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ನಡೆದ ಇಂಜಿನಿಯರ್ಸ್ ಹಾಗೂ ಶಿಕ್ಷಕರ ದಿನಾಚರಣೆ-2026ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು, ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇದ್ದಲ್ಲಿ ಉತ್ತಮವಾಗಿ ಬೆಳೆಯಬೇಕೆಂಬ ನಿರೀಕ್ಷಿಸಬಹುದು. ಪ್ರಶ್ನೆಗಳನ್ನು ಕೇಳುವ ಮನೋಭಾವನೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಮೂಡಿಸಬೇಕು ಎಂದರು.

ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಮಂಗಳನಾಥ ಸ್ವಾಮೀಜಿ ಮಾತನಾಡಿ, ಭಾರತ ರತ್ನ ಸರ್. ಎಂ.ವಿಶ್ವೇಶ್ವರಯ್ಯ ರವರ ಸಾಧನೆಗಳನ್ನು ಸ್ಮರಿಸಿ, ಇಂಜಿನಿಯರ್‌ಗಳು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಗೌರವಿಸುವ ಅಮೂಲ್ಯವಾದ ದಿನ. ಯಾವುದೇ ಸಣ್ಣ ಕೆಲಸವೇ ಆಗಲಿ ಶ್ರದ್ಧೆಯಿಂದ ಮಾಡಿದ್ದಲ್ಲಿ ಪರಿಪೂರ್ಣತೆಯನ್ನು ಕಾಣುತ್ತದೆ ಎಂದು ಹೇಳಿದರು.

ಪ್ರಾಂಶುಪಾಲ ಡಾ.ಜಿ.ಟಿ.ರಾಜು ಮಾತನಾಡಿ, ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಶಿಕ್ಷಕರ ಕೊಡುಗೆ ದೊಡ್ಡದು. ಈ ನಿಟ್ಟಿನಲ್ಲಿ ಶಿಕ್ಷಕರ ದಿನಾಚರಣೆ ಕೇವಲ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗದೆ, ಇಡೀ ಸಮಾಜ ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಮೂಲಕ ಶಿಕ್ಷಕ ಸಮುದಾಯವನ್ನು ಗೌರವಿಸಬೇಕು ಎಂದರು

ಕಾರ್ಯಕ್ರಮದಲ್ಲಿ ಕಾಲೇಜಿನ ನಿವೃತ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಹಾಗೂ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂಧರ್ಭದಲ್ಲಿ ಆಡಳಿತಾಧಿಕಾರಿ ರಂಗಸ್ವಾಮಿ ಜಿ.ಆರ್, ಡೀನ್ ಅಕಾಡೆಮಿಕ್ಸ್ ಮುಖ್ಯಸ್ಥ ಡಾ. ಮಂಜುನಾಥ್ ಕುಮಾರ್‌ಬಿ.ಎಚ್ ಇದ್ದರು.


**PUBLIC NOTICE**

My client is intending to purchase th schedule mentioned property from its owne **Sri. SOMAPPA, aged about 54 years, S/ Late. Sri. Seethappa, r/at. Nidaramangal Village, Tekal Hobli, Malur Taluk, Kola District, AADHAAR No. 7367 4571 300** The owner has represented that the schedul property is free from all encumbrances. Be known, that if any person/s having an objections in respect of the schedule propert they shall lodge their claim / objections wit documentary proof to the undersigned withi **07 (Seven) days** from the date of publicatio of this notice. In the absence of receipt of an legally, valid claim/objections within th aforesaid period, my client will proceed wit the purchase of the schedule property.

**SCHEDULE PROPERTY**

ALL THAT PIECE AND PARCEL of th immovable property agricultural land bearin **Sy.No. 124/2, measuring an extent o 0-39.00 Guntas,** situated a **NIDARAMANGALA VILLAGE,** Tekal Hobl Malur Taluk, Kolar District and bounded on: **EAST BY :** Land of Chikkappaiah, **WEST BY** Land of Narayanappa, **NORTH BY :** Land of Muniyappa, **SOUTH BY :** Chambe Villag Road.

**K. MOHAN,** Advocate
No. 64, 4th Cross, Indiranagar 2nd Stage, Bengaluru-560 038.
**Mobile No. 9845234925**


KOLAR Edition
Sep 16, 2026 Page No. 02
Powered by: erelego.com

# ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ

## ಎಸ್‌ಜೆಸಿಐಟಿ ಕಾಲೇಜಿನಲ್ಲಿ ಎಂಜಿನಿಯರ್ಸ್ ದಿನಾಚರಣೆ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ನಗರದ ಎಸ್‌ಜೆಸಿಐಟಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಂಜಿನಿಯರ್‌ಗಳ ದಿನ ಮತ್ತು ಶಿಕ್ಷಕರ ದಿನಾಚರಣೆಯನ್ನು ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಶಿಕ್ಷಣ ತಜ್ಞ ಎಚ್.ಎನ್. ಶಿವಶಂಕರ್ ಮಾತನಾಡಿ, 'ಶಿಕ್ಷಕರು, ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುವ ಮೂಲಕ ಅವರಲ್ಲಿ ಪ್ರಶ್ನಿಸುವ ಮನೋಭಾವ ಬೆಳೆಸಬೇಕು. ಕಲಿಕೆ ಮೂಲಕ ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಕಲಿಕೆಯೇ ಮೆದುಳಿಗೆ ಟಾನಿಕ್ ಇದ್ದಂತೆ' ಎಂದು ಸಲಹೆ ನೀಡಿದರು.

ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಸಾಧನೆಗಳು ಸ್ಮರಣೀಯ. ಯಾವುದೇ ಕೆಲಸವನ್ನು ಶ್ರದ್ಧೆ ಮತ್ತು ಬದ್ಧತೆಯಿಂದ ಮಾಡಿದರೆ ಪರಿಪೂರ್ಣತೆ ಸಾಧಿಸಲು ಸಾಧ್ಯ. ಶಿಕ್ಷಣವು ಕೇವಲ ಜ್ಞಾನ ನೀಡುವುದಷ್ಟೇ ಅಲ್ಲದೆ, ವ್ಯಕ್ತಿತ್ವ ರೂಪಿಸುವ ಕೆಲಸವನ್ನೂ ಮಾಡುತ್ತದೆ ಎಂದರು.

ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ತತ್ವಜ್ಞಾನಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆದರ್ಶಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಶಿಕ್ಷಣವು ವ್ಯಕ್ತಿತ್ವ ಪರಿವರ್ತನೆ ಹಾಗೂ ಸಮಾಜದತ್ತ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದರು.




ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಂಗಳವಾರ 'ಎಂಜಿನಿಯರ್‌ಗಳ ದಿನ ಹಾಗೂ ಶಿಕ್ಷಕರ ದಿನಾಚರಣೆ' ಕಾರ್ಯಕ್ರಮ ನಡೆಯಿತು

ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಮಂಗಳನಾಥ ಸ್ವಾಮೀಜಿ, 'ಇಂದಿನ ತಲೆಮಾರಿಗೆ ಸೂಕ್ತವಾಗುವಂತೆ ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಂಡು ಹೊಸ ಜ್ಞಾನ ಗಳಿಸಬೇಕು. ಹಳೆಯ ಬೇರುಗಳೊಂದಿಗೆ ಹೊಸ ಚಿಗುರಿನಂತೆ ಜ್ಞಾನ ಮತ್ತು ತಂತ್ರಜ್ಞಾನವನ್ನು ಬೆಳೆಸಿಕೊಳ್ಳಬೇಕು' ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಜಿ.ಟಿ. ರಾಜು ಮಾತನಾಡಿ, 'ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ, ನಾಯಕತ್ವ ಗುಣ ಹಾಗೂ ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಬೋಧಕ, ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತಾಧಿಕಾರಿ ರಂಗಸ್ವಾಮಿ ಜಿ.ಆರ್., ಮುಖ್ಯಸ್ಥ ಮಂಜುನಾಥ್ ಕುಮಾರ್ ಬಿ.ಎಚ್., ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

VK ವಿಜಯ ಕರ್ನಾಟಕ

NAMMA CHIKKABALLAPURA

17 SEP 2026

# ಸಮಾಜಮುಖಿ ಎಂಜಿನಿಯರ್ ರೂಪಿಸುವುದು ಶಿಕ್ಷಕರ ಹೊಣೆ

## ಎಸ್‌ಜೆಸಿಐಟಿಯಲ್ಲಿ ನಡೆದ ಎಂಜಿನಿಯರ್ಸ್ ಡೇ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಡಾ. ಶಿವಶಂಕರ್ ಅಭಿಮತ

**ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಶಿಕ್ಷಣವೆಂದರೆ ಕೇವಲ ಅಂಕ ಗಳಿಕೆಯಲ್ಲ, ವ್ಯಕ್ತಿತ್ವದ ಪರಿವರ್ತನೆ. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವ ಬೆಳೆಸಿ, ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ಸಮರ್ಥ ಎಂಜಿನಿಯರ್‌ಗಳನ್ನಾಗಿ ರೂಪಿಸಬೇಕು ಎಂದು ಹಿರಿಯ ಶಿಕ್ಷಣ ತಜ್ಞ ಡಾ. ಎಚ್.ಎನ್. ಶಿವಶಂಕರ್ ಕರೆ ನೀಡಿದರು.

ನಗರ ಹೊರವಲಯದ ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯದ ಬಿಜಿಎಸ್ ಕಾನ್ಫರೆನ್ಸ್ ಹಾಲ್‌ನಲ್ಲಿ ಮಂಗಳವಾರ ನಡೆದ ಎಂಜಿನಿಯರ್ಸ್ ಡೇ ಹಾಗೂ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಕಲಿಕೆಯೇ ಮೆದುಳಿಗೆ ಟಾನಿಕ್. ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಂಡಾಗ ಮಾತ್ರ ಅವರಲ್ಲಿ ಅತ್ಯುತ್ತಮ ಬೆಳವಣಿಗೆ ಸಾಧ್ಯ. ಕೇವಲ ಎಂಜಿನಿಯರ್‌ಗಳು ಮಾತ್ರವಲ್ಲ, ಸಮಾಜಮುಖಿ ಚಿಂತನೆಯುಳ್ಳವರನ್ನು ಸಮಾಜಕ್ಕೆ ಕೊಡುಗೆ ನೀಡಬೇಕು ಎಂದ ಅವರು, ಮಾಜಿ ರಾಷ್ಟ್ರಪತಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರಿಂದಲೇ ಪದವಿ ಪ್ರಮಾಣಪತ್ರ ಪಡೆದ ಕ್ಷಣಗಳನ್ನು ಇದೇ ವೇಳೆ ಅವರು ಮೆಲುಕು ಹಾಕಿದರು.



ಚಿಕ್ಕಬಳ್ಳಾಪುರ ಹೊರವಲಯದ ಎಸ್‌ಜೆಸಿಐಟಿಯಲ್ಲಿ ಎಂಜಿನಿಯರ್ಸ್ ಡೇ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಆದಿಚುಂಚನಗಿರಿ ಶಾಖಾ ಮಠಾಧೀಶ ಶ್ರೀ ಮಂಗಳನಾಥ ಸ್ವಾಮೀಜಿ ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ. ಎಚ್.ಎನ್. ಶಿವಶಂಕರ್ ಮತ್ತಿತರರಿದ್ದರು.

> ಹೊಸ ಚಿಗುರು ಹಳೆ ಬೇರು ಸಮಾಗಮಗೊಂಡಾಗ ಮಾತ್ರ ಸಮಾಜಕ್ಕೆ ಶೋಭೆ. ಇಂದಿನ ಯುವಪೀಳಿಗೆ ಆಧುನಿಕ ತಂತ್ರಜ್ಞಾನವನ್ನು ಸಮಾಜದ ಒಳಿತಿಗಾಗಿ ಸದ್ಬಳಕೆ ಮಾಡಿಕೊಳ್ಳಬೇಕು.
>
> **-ಶ್ರೀ ಮಂಗಳನಾಥ ಸ್ವಾಮೀಜಿ** | ಆದಿಚುಂಚನಗಿರಿ ಶಾಖಾ ಮಠಾಧೀಶ

ಪ್ರಿನ್ಸಿಪಾಲ್ ಡಾ. ಜಿ.ಟಿ. ರಾಜು ಮಾತನಾಡಿ, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ದೂರದೃಷ್ಟಿ ಹಾಗೂ ಕೊಡುಗೆ ಪ್ರತಿಯೊಬ್ಬ ಎಂಜಿನಿಯರ್‌ಗೂ ಸ್ಫೂರ್ತಿ. ಯಾವುದೇ ಸಣ್ಣ ಕೆಲಸವಾದರೂ ಶ್ರದ್ಧೆಯಿಂದ ನಿರ್ವಹಿಸಿದಾಗ ಮಾತ್ರ ಪರಿಪೂರ್ಣತೆ ಸಾಧ್ಯ ಎಂದರು. ನಂತರ ಗುರುವಿನ ಕರುಣೆಯಾಗಬೇಕಾದರೆ ಗರ್ವವ ಬಿಡಬೇಕು ಎಂಬ ಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ನಿವೃತ್ತ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ಜತೆಗೆ ನಾನಾ ವಿಭಾಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅತ್ಯುತ್ತಮ ಸಿಬ್ಬಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಜಿ.ಆರ್.ರಂಗಸ್ವಾಮಿ, ಅಕಾಡೆಮಿಕ್ಸ್ ಡೀನ್ ಡಾ. ಬಿ.ಎಚ್. ಮಂಜುನಾಥ್ ಕುಮಾರ್, ನಾನಾ ವಿಭಾಗಗಳ ಮುಖ್ಯಸ್ಥರು ಮತ್ತು ಕಾಲೇಜಿನ ಸಿಬ್ಬಂದಿ ಇದ್ದರು.

# एसजेसी तकनीकी महाविद्यालय में इंजीनियर्स डे एवं शिक्षक दिवस समारोह

**हिन्द सागर,**

**चिक्कबल्लापुर:** एसजेसी तकनीकी महाविद्यालय के बीजीएस कॉन्फ्रेंस हॉल में मंगलवार, 15 सितंबर 2026 को सुबह 11 बजे "इंजीनियर्स डे एवं शिक्षक दिवस समारोह-2026" का आयोजन किया गया। कार्यक्रम परमपूज्य जगद्गुरु श्री श्री श्री डॉ. निर्मलानंदनाथ महास्वामीजी के दिव्य आशीर्वाद तथा पूज्य श्री श्री मंगलनाथ स्वामीजी के सानिध्य में संपन्न हुआ। कार्यक्रम में मुख्य अतिथि के रूप में वरिष्ठ शिक्षाविद् एवं मार्गदर्शक डॉ. एच.एन. शिवशंकर, यूवीसीई बेंगलुरु के सेवानिवृत्त प्राचार्य एवं आरएनएसआईटी के पूर्व निदेशक उपस्थित रहे। इसके अलावा महाविद्यालय के प्राचार्य डॉ. जी.टी. राजू, प्रशासनिक अधिकारी श्री रंगस्वामी जी.आर., कंप्यूटर विभाग के प्रमुख एवं डीन एकेडमिक्स डॉ. मंजुनाथ कुमार बी.एच., विभिन्न विभागों के प्रमुख, शिक्षण एवं गैर-शिक्षण कर्मचारी तथा महाविद्यालय के समस्त स्टाफ ने भाग लिया। प्राचार्य डॉ. जी.टी. राजू ने अतिथियों का स्वागत करते हुए भारत रत्न सर एम. विश्वेश्वरैया की उपलब्धियों को याद किया। उन्होंने कहा कि इंजीनियर्स डे समाज के निर्माण और विकास में इंजीनियरों के महत्वपूर्ण योगदान को सम्मानित करने का दिन है। कोई भी छोटा कार्य यदि श्रद्धा और लगन से किया जाए तो उसमें पूर्णता प्राप्त की जा सकती है। उन्होंने कहा कि शिक्षक विद्यार्थियों को केवल शिक्षा ही नहीं देते, बल्कि उनके व्यक्तित्व का भी निर्माण करते हैं। डॉ. सर्वपल्ली राधाकृष्णन को याद करते हुए उन्होंने कहा कि शिक्षकों को उनके आदर्शों को अपने जीवन में अपनाना चाहिए। कार्यक्रम में डॉ. एच.एन. शिवशंकर ने कहा कि शिक्षकों को विद्यार्थियों को अपने बच्चों की तरह समझना चाहिए। यदि विद्यार्थियों के प्रति सच्ची चिंता और लगाव हो तो उनके बेहतर विकास की उम्मीद की जा सकती है। प्रत्येक विद्यार्थी में प्रश्न पूछने की प्रवृत्ति विकसित करनी चाहिए। उन्होंने कहा कि सीखना मस्तिष्क के लिए टॉनिक के समान है और एक इंजीनियर में समाज की समस्याओं का समाधान करने की क्षमता विकसित होनी चाहिए। उन्होंने अपने लंबे शैक्षणिक अनुभवों को शिक्षकों के साथ साझा किया। उन्होंने यह भी कहा कि यह उनके लिए गर्व की बात है कि उन्होंने स्वयं डॉ. सर्वपल्ली राधाकृष्णन से अपनी डिग्री का प्रमाणपत्र प्राप्त किया था। भारत रत्न सर एम. विश्वेश्वरैया की उपलब्धियों को स्मरण करते हुए उन्होंने कहा कि इंजीनियर्स डे समाज को इंजीनियरों के योगदान का सम्मान करने का महत्वपूर्ण अवसर है। शिक्षा व्यक्ति के व्यक्तित्व में परिवर्तन लाने का माध्यम है और सक्षम, जिम्मेदार तथा समाजोन्मुख इंजीनियर तैयार करने में इसकी महत्वपूर्ण भूमिका है। पूज्य श्री श्री मंगलनाथ स्वामीजी ने अपने आशीर्वचन में कहा कि वर्तमान पीढ़ी को तकनीक का सदुपयोग करना चाहिए। "नए अंकुर और पुरानी जड़ें हों तो ही सुंदरता आती है" की भावना के अनुरूप विद्यार्थियों को निरंतर ज्ञान अर्जित करना चाहिए। उन्होंने कहा कि एसजेसीआईटी में प्राचार्य डॉ. जी.टी. राजू का मार्गदर्शन, बेहतर नेतृत्व और प्रत्येक व्यक्ति के विकास की भावना सभी के लिए प्रेरणादायक है। इस अवसर पर प्राचार्य डॉ. जी.टी. राजू ने "गुरु की कृपा पानी हो तो अहंकार छोड़ना होगा" जैसे भाव वाले गीत की प्रस्तुति देकर कार्यक्रम में विशेष आकर्षण जोड़ा। समारोह के दौरान महाविद्यालय के सेवानिवृत्त शिक्षण एवं गैर-शिक्षण कर्मचारियों को सम्मानित किया गया। साथ ही विभिन्न विभागों में उत्कृष्ट सेवाएं प्रदान करने वाले कर्मचारियों को पुरस्कार देकर सम्मानित किया गया।



# *TEACHERS' & ENGINEERS' DAY-2026 – GLIPMSES*






G. T. Raju
SJCIT,Chickballapur
SJCIT




SJC INSTITUTE OF TECHNOLOGY
Teachers' &
Engineers' Day 2026
Chief Guest
Dr. H N Shivashankar




Teachers' &
Engineers' Day 2026
Chief Guest
Dr. H N Shivashankar








www.sjcit.ac.in
Chikkaballapura - 562 101, Karnataka
Teachers' &
Engineers' Day 2026
Chief Guest


Chief Guest
Dr. H N Shivashankar
Former Principal, University Visvesvaraya College of Engineering (UVCE), Bengaluru
Formerly Chairman, Department of ECE & CSE, UVCE, Bengaluru
Dean, Faculty of Engineering, Bengaluru University
Dr. G. T. Raju
Dr. H N Shivashankar

